ದಿನಾಂಕ : 25.07.2024
ಅಸಲು ದಾವೆ: 97/2020
ಪಿ.ಡಬ್ಲ್ಯೂ: 1

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು : ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎಸ್.ಜೆ. ರವರಿಂದ :</u>**

ಪ್ರತಿವಾದಿಯರು ಏನು ತಕರಾರು ಸಲ್ಲಿಸಿದ್ದಾರೆ ಎಂದು ನಮ್ಮ ವಕೀಲರ ಮೂಲಕ ಕೇಳಿ ತಿಳಿದುಕೊಂಡಿದ್ದೇನೆ. ಕೆ.ಟಿ.ಪುನೀತ್ ರವರಿಗೆ ನೀವು ಚಿಕ್ಕಮ್ಮ ಆಗಬೇಕುಎಂದು ತಕರಾರಿನಲ್ಲಿ ಹೇಳಿದ್ದಾರೆ, ಆ ವಿಚಾರ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನೀವು ಮತ್ತು ಕೆ.ಟಿ.ಪುನೀತ್ ರವರು ವಿವಾಹವಾಗಲು ಕಾನೂನು ಪ್ರಕಾರ ಪ್ರತಿಬಂಧ ಇರುತ್ತದೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನೀವು ಮತ್ತು ಕೆ.ಟಿ.ಪುನೀತ್ ರವರು ಸಂಬಂಧದಲ್ಲಿ ಚಿಕ್ಕಮ್ಮ ಮತ್ತು ಮಗ ಆಗಬೇಕು ಎಂದು ಗೊತ್ತಿದ್ದರೂ ಸಹಾ ಕುಟುಂಬದವರ ವಿರೋಧವಿದ್ದರೂ ನೀವಿಬ್ಬರು ಮದುವೆ ಮಾಡಿಕೊಳ್ಳಲು ನಿರ್ದರಿಸಿದ್ದೀರಿ ಎಂದರೆ ಸಾಕ್ಷಿ ಇಲ್ಲ ಮನೆಯವರೆಲ್ಲಾ ಒಪ್ಪಿಯೆ ಮದುವೆ ಮಾಡಿಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ನೀವು ಕೆ.ಟಿ.ಪುನೀತ್ ರವರ ಕುಟುಂಬಕ್ಕೆ ಇದ್ದ ಆಸ್ತಿಯನ್ನು ನೋಡಿ ಅವರನ್ನು ಪ್ರೀತಿಸಿ ನೀವೇ ಪ್ರಚೋದಿಸಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಕೆ.ಟಿ.ಪುನೀತ್ ರವರು ಅಮಾಯಕರಾಗಿದ್ದು, ನೀವೇ ಅವರನ್ನು ಒತ್ತಾಯಪೂರ್ವಕವಾಗಿ ನಿಮ್ಮನ್ನು ಮದುವೆ ಮಾಡಿಕೊಳ್ಳುವಂತೆ ಪ್ರಚೋದಿಸಿದ್ದೀರಿ ಎಂದರೆ ಸಾಕ್ಷಿ ಇಲ್ಲ ನಾನು ಬೇಡವೆಂದು ನಿರ್ಧರಿಸಿದ್ದಾಗ ಅವರೇ ನಮ್ಮ ಮನೆಗೆ ಬಂದು ನಿನ್ನನೇ ಮದುವೆಯಾಗುವುದು ಎಂದು ಹೇಳಿ ನಮ್ಮ ಮನೆಯವರೆಲ್ಲರನ್ನೂ ಒತ್ತಾಯ ಪಡಿಸಿ ಮದುವೆ ಮಾಡಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ನೀವು ಕೆ.ಟಿ.ಪುನೀತ್ ರವರನ್ನು ತುಂಬಾ ಹಚ್ಚಿಕೊಂಡು ಆಳವಾಗಿ ಪ್ರೀತಿಸುತ್ತಿದ್ದಿರಿ ಎಂದರೆ ಸಾಕ್ಷಿ ಇಬ್ಬರೂ ಪ್ರೀತಿಸುತ್ತಿದ್ದೆವು ಎಂದು ಉತ್ತರಿಸುತ್ತಾರೆ. ನಿಮ್ಮ ವಿವಾಹಕ್ಕೂ ಮುಂಚಿತವಾಗಿ ಪುನೀತ್ ರವರು ನಿಮ್ಮ ಮನೆಗೆ ಹೋಗಿ ಬಂದು ಮಾಡುತ್ತಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು

ಉತ್ತರಿಸುತ್ತಾರೆ. ನಾನು ಪುನೀತ್ ರವರನ್ನು ನನ್ನ ಕಾಲೇಜು ದಿನಗಳಿಂದಲೂ ಪ್ರೀತಿಸುತ್ತಿದ್ದೆನು ಎಂದರೆ ಸರಿ. ಈ ವಿಚಾರವಾಗಿ ಪುನೀತ್ ರವರ ತಂದೆ ತಾಯಿ ಮತ್ತು ಸಹೋದರ ಅಂದರೆ ಈ ದಾವೆಯ ಪ್ರತಿವಾದಿಯರು ಬೇಡ ಎಂದು ನಿಮಗೆ ಬಂದು ಹೇಳಿದರು ಎಂದರೆ ಸಾಕ್ಷಿ ನನಗೆ ಯಾರು ಬಂದು ಹೇಳಿಲ್ಲ ಎಂದು ಉತ್ತರಿಸುತ್ತಾರೆ.

ಕೆ.ಟಿ.ಪುನೀತ್ ರವರ ಕುಟುಂಬದ ಮನೆಯ ಹಿರಿಯರೆಲ್ಲಾ ನಿಮಗೆ ಸಾಕಷ್ಟು ಬುದ್ಧಿ ಹೇಳಿದರೂ ನೀವೇ ಹಠಕ್ಕೆ ಬಿದ್ದು ಕೆ.ಟಿ.ಪುನೀತ್ ರವರನ್ನು ಮದುವೆಯಾಗಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನೀವಾಗಿ ನೀವೇ ಮದುವೆ ಮಾಡಿಕೊಡದೆ ಇದ್ದಲ್ಲಿ ಪುನೀತ್ ರವರ ಜೊತೆ ಓಡಿ ಹೋಗಿ ಮದುವೆಯಾಗುವುದಾಗಿ ನೀವು ಪ್ರತಿವಾದಿಯರ ಕುಟುಂಬಕ್ಕೆ ಬೆದರಿಕೆ ಹಾಕಿದ್ದಿರಿ ಎಂದರೆ ಸಾಕ್ಷಿ ನಾನು ಆ ರೀತಿ ಏನು ಮಾಡಿಲ್ಲ ಎಂದು ಉತ್ತರಿಸುತ್ತಾರೆ. ನೀವು ಆ ರೀತಿ ಬೆದರಿಕೆ ಹಾಕಿದ್ದರಿಂದ ಅನ್ಯ ಮಾರ್ಗವಿಲ್ಲದೆ ಪುನೀತ್ ರವರ ಕುಟುಂಬದವರು ನಿಮ್ಮ ಜೊತೆ ಅನಿವಾರ್ಯವಾಗಿ ಮದುವೆ ಮಾಡಿಸಿದರು ಎಂದರೆ ಸಾಕ್ಷಿ ಸುಳ್ಳು ಎಲ್ಲರೂ ಒಪ್ಪಿ ಮದುವೆ ಮಾಡಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಬೇರೆ ದಾರಿ ಇಲ್ಲದೆ ಕೆ.ಟಿ.ಪುನೀತ್ ರವರ ಕುಟುಂಬದವರು ಅವರೇ ಮದುವೆ ಖರ್ಚು ಮತ್ತು ಒಡವೆ ಇತ್ಯಾದಿ ಖರ್ಚು ವೆಚ್ಚಗಳನ್ನು ಮಾಡಿ ಚನ್ನಪಟ್ಟಣದ ಹತ್ತಿರ ಇರುವ ಕೆಂಗಲ್ ದೇವಸ್ಥಾನದಲ್ಲಿ ಮದುವೆ ಮಾಡಿಕೊಂಡಿದ್ದಾರೆ ಸಾಕ್ಷಿ ಅವರು ತಮ್ಮ ಮಗನಿಗೆ ಹುಷಾರಿಲ್ಲದೆ ಇರುವಾಗ ಹರಸಿಕೊಂಡಿದ್ದೆವು, ಹಾಗಾಗಿ ಮದುವೆಯ ಖರ್ಚನ್ನು ನಾವೇ ಮಾಡುತ್ತೇವೆ ಎಂದು ಹೇಳಿ ಅವರೇ ಮಾಡಿಕೊಂಡಿರುತ್ತಾರೆ, ಇಲ್ಲದಿದ್ದಲ್ಲಿ ನಮ್ಮ ಮನೆಯವರೇ ಖರ್ಚು ಮಾಡಲು ತಯಾರಿದ್ದರು ಎಂದು ಉತ್ತರಿಸುತ್ತಾರೆ. ಮದುವೆಯ ಖರ್ಚು ವೆಚ್ಚಗಳನ್ನು 2 ಮತ್ತು 3 ನೇ ಪ್ರತಿವಾದಿಯರು ಭರಿಸಿದ್ದರು ಎಂದರೆ ಸಾಕ್ಷಿ ಇಲ್ಲ ಎಲ್ಲಾ ಖರ್ಚನ್ನು ನನ್ನ ಗಂಡನೇ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ.

ನಮ್ಮ ವಿವಾಹ ದಿನಾಂಕ 24.04.2014 ರಂದು ಆಗಿರುತ್ತದೆ. ನಿಮ್ಮ ಮದುವೆಯಾದ ನಂತರ ನೀವು ಎಷ್ಟು ದಿನಗಳು ಪುನೀತ್ ರವರ ಜೊತೆ ಅವರ ಮನೆಯಲ್ಲಿ ಸಂಸಾರ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿ ಅವರು ಇರುವವರೆಗೂ ಅವರ ಜೊತೆಯಲ್ಲಿಯೇ ಇದ್ದೆ ಎಂದು ಉತ್ತರಿಸುತ್ತಾರೆ. ನಿಮ್ಮ ಮದುವೆಯಾದ ನಂತರ ನೀವು ಪುನೀತ್ ರವರ ಜೊತೆ ಕೇವಲ 2-3 ತಿಂಗಳು ಮಾತ್ರ ಇದ್ದದ್ದು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಮದುವೆಗೂ

ಮುನ್ನಾ ನಾನು ಕಾಲೇಜಿಗೆ ಹೋಗುತ್ತಿದ್ದೆನು. ನಾನು ಬಿ.ಕಾಂ ಓದಿರುತ್ತೇನೆ. ನೀವು ಮದುವೆಯಾಗುವ ಪೂರ್ವದಲ್ಲಿ ಕೆ.ಎಂ.ದೊಡ್ಡಿ ಜಿ.ಮಾದೇಗೌಡ ಆಸ್ಪತ್ರೆಯಲ್ಲಿ ತಾತ್ಕಲಿಕವಾಗಿ ಕೆಲಸಕ್ಕೆ ಹೋಗುತ್ತಿದ್ದಿರಿ ಎಂದರೆ ಸಾಕ್ಷಿ ಇಲ್ಲ ಕಾಲೇಜಿಗೆ ಹೋಗುತ್ತಿದ್ದೆ ಎಂದು ಉತ್ತರಿಸುತ್ತಾರೆ. ನಾನು ನನ್ನ ಮಗು ಜನಿಸಿದ ನಂತರ ಅಂದಾಜು 2016 ರಿಂದ ಕೆಲಸಕ್ಕೆ ಹೋಗುತ್ತಿದ್ದೆ. ನನ್ನ ಮಗುವಿನ ಜನ್ಮ ದಿನಾಂಕ 03.09.2015. ನಾನು ಸದರಿ ಆಸ್ಪತ್ರೆಯಲ್ಲಿ ಸುಮಾರು 4 ವರ್ಷ ಕೆಲಸ ಮಾಡಿರುತ್ತೇನೆ. ಎರಡು ವರ್ಷಗಳ ಹಿಂದೆ ನಾನು ಕೆಲಸ ಬಿಟ್ಟಿರುತ್ತೇನೆ. ನನಗೆ ಸದರಿ ಆಸ್ಪತ್ರೆಯಲ್ಲಿ ತಿಂಗಳಿಗೆ ರೂ.12,000/- ಸಂಬಳ ಬರುತ್ತಿತ್ತು.

ನಿಮ್ಮ ಮದುವೆಯಾದ 2 ತಿಂಗಳ ನಂತರ ಕೆ.ಟಿ.ಪುನೀತ್ ರವರ ಕುಟುಂಬದಿಂದ ಪ್ರತ್ಯೇಕವಾಗಿ ಹೋಗುವುದಕ್ಕೆ ಪುಸಲಾಯಿಸಿರುತ್ತೀರಿ ಮತ್ತು ಪ್ರತ್ಯೇಕ ಮನೆ ಮಾಡಲು ಒತ್ತಾಯಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಅನಾವಶ್ಯಕವಾಗಿ ಮತ್ತು ಅನಗತ್ಯವಾಗಿ ದುಡ್ಡು ಬೇಕು ಎಂದು ನೀವು ಪುನೀತ್ ರವರಿಗೆ ಪೀಡಿಸುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನೀವು ಪುನೀತ್ ರವರಿಗೆ ದುಡ್ಡು ಬೇಕು ಎಂದು ಅನಾವಶ್ಯಕವಾಗಿ ಪೀಡಿಸುತ್ತಿದ್ದ ವಿಚಾರವನ್ನು ಮತ್ತು ಪ್ರತ್ಯೇಕ ಮನೆ ಮಾಡಿ ಇಡುವಂತೆ ಒತ್ತಾಯಿಸುತ್ತಿದ್ದ ವಿಚಾರವನ್ನು ಪುನೀತ್ ರವರು ತಮ್ಮ ತಂದೆ ತಾಯಿ ಹಾಗೂ ಸಹೋದರರ ಬಳಿ ಹೇಳಿಕೊಂಡಿದ್ದರು ಎಂದರೆ ಸಾಕ್ಷಿ ಅವರ್ಯಾರು ಮಾತನಾಡಿಸುತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ. ನೀವು ಕೆ.ಟಿ.ಪುನೀತ್ ರವರ ಕುಟುಂಬಕ್ಕೆ ಇದ್ದ ಆಸ್ತಿಯ ಬಗ್ಗೆ ತಿಳಿದುಕೊಂಡು ಐಷಾರಾಮಿ ಜೀವನಕ್ಕೆ ಪುನೀತ್ ರವರಿಗೆ ಒತ್ತಾಯಿಸುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನೀವು ಮತ್ತು ಪುನೀತ್ ರವರು 2 ತಿಂಗಳು ಮಾತ್ರ ಚೆನ್ನಾಗಿದ್ದು ನಂತರ 3-4 ತಿಂಗಳು ಹೋರಾಟ ಜೀವನವಿದ್ದು ನಂತರ ಮಗುವಿನ ಬಾಣಂತನಕ್ಕೋಸ್ಕರ ನಿಮ್ಮ ತವರು ಮನೆಗೆ ಹೋಗಿರುತ್ತೀರಿ ಎಂದರೆ ಸಾಕ್ಷಿ ನಾವಿಬ್ಬರು ಹೊಂದಾಣಿಕೆಯಿಂದಲೇ ಇದ್ದೆವು, ನಮ್ಮ ಮದುವೆಯಾಗಿ 9 ತಿಂಗಳಿಗೆ ನಾನು ಗರ್ಭಿಯಾಗಿರುತ್ತೇನೆ ಎಂದು ಉತ್ತರಿಸುತ್ತಾರೆ. ನೀವು ಮಗುವಿನ ಬಾಣಂತನಕ್ಕೆ ತವರು ಮನೆಗೆ ಹೋದವರು, ಪುನೀತ್ ಹಾಗೂ ಅವರ ಕುಟುಂಬದ ಎಲ್ಲಾ ಸದಸ್ಯರು ಬಂದು ನಿಮ್ಮನ್ನು ಮನೆಗೆ ಕರೆದರೂ ಸಹಾ ನೀವು ಬರಲು ನಿರಾಕರಿಸಿದಿರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮಗೆ ಮತ್ತು ಪುನೀತ್ ರವರಿಗೆ ಪ್ರತ್ಯೇಕ ಮನೆ ಮಾಡಿ ಇರಿಸಿದರೆ ಮಾತ್ರ ಬರುವುದಾಗಿ ನೀವು ಡಿಮ್ಯಾಂಡ್ ಇಟ್ಟಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

ಪುನೀತ್ ರವರ ಕುಟುಂಬದವರು ಅವರ ಮೇಲೆ ಇರಿಸಿದ್ದ ಅದಮ್ಯ ಪ್ರೀತಿಯಿಂದ ಅವರ ಜೀವನ ಸರಿ ಹೋಗಲಿ ಎಂದು ಅವರ ಮನೆಯ ಪಕ್ಕದಲ್ಲಿಯೇ ಇದ್ದ ಇನ್ನೊಂದು ಮನೆಯನ್ನು ನಿಮಗೆ ಬಿಟ್ಟುಕೊಟ್ಟಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಪುನೀತ್ ಹಾಗೂ ನೀವು ಅವರ ಕುಟುಂಬದವರನ್ನು ಹೊರತು ಪಡಿಸಿ ನೀವಿಬ್ಬರು ದಂಪತಿಗಳು ಒಟ್ಟಿಗೆ ವಾಸವಿದ್ದೀರಿ ಅಥವಾ ಇಲ್ಲವಾ ಎಂದರೆ ಸಾಕ್ಷಿ ಎಲ್ಲರೂ ಒಟ್ಟಿಗೆ ಇದ್ದೆವು ಎಂದು ಉತ್ತರಿಸುತ್ತಾರೆ. ಎಷ್ಟು ವರ್ಷ ನೀವು ಪುನೀತ್ ರವರ ಕುಟುಂಬದವರೊಂದಿಗೆ ಒಟ್ಟಿಗೆ ಇದ್ದೀರಿ ಎಂದರೆ ಸಾಕ್ಷಿ ನಾನು ಬಾಣಂತನ ಮುಗಿಸಿಕೊಂಡು ಬಂದ ನಂತರ ಅವರೇ ಪಕ್ಕದ ಮನೆಗೆ ಶಿಫ್ಟ್ ಆದರು ಎಂದು ಉತ್ತರಿಸುತ್ತಾರೆ. ನಾವು ಇದ್ದ ಮನೆ ಮತ್ತು ಪ್ರತಿವಾದಿಯರು ಶಿಫ್ಟ್ ಆದ ಮನೆ ಎರಡೂ ಪ್ರತಿವಾದಿಯರಿಗೆ ಸೇರಿದ ಮನೆ ಎಂದರೆ ಸರಿ. ನೀವು ಬಾಣಂತನ ಮುಗಿಸಿಕೊಂಡು ಬಂದ ನಂತರ ಪುನೀತ್ ರವರ ಕುಟುಂಬದವರ ಜೊತೆ ಎಂದೂ ವಾಸವಿರಲಿಲ್ಲ ಎಂದರೆ ಸಾಕ್ಷಿ ನಾನು, ನನ್ನ ಗಂಡ, ನನ್ನ ಮಗು ಮತ್ತು ನನ್ನ ಮಾವ ಒಂದು ಮನೆಯಲ್ಲಿ ಇದ್ದೆವು ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿ ಯಾವ ಕಾಲಕ್ಕೂ ನಿಮ್ಮ ಜೊತೆ ವಾಸವಿರಲಿಲ್ಲ, ಅವರು ತನ್ನ ಹೆಂಡತಿ ಮತ್ತು ತನ್ನ ಮಗ 2 ನೇ ಪ್ರತಿವಾದಿ ಜೊತೆ ವಾಸವಿದ್ದರು ಎಂದರೆ ಸಾಕ್ಷಿ ಸುಳ್ಳು ಅವರು ನನ್ನ ಜೊತೆಯೇ ವಾಸವಿದ್ದರು ಎಂದು ಉತ್ತರಿಸುತ್ತಾರೆ.

ನಾನು ವಾಸವಿರುವ ಮನೆ ಮತ್ತು ನಾನು ಕೆಲಸ ಮಾಡುತ್ತಿದ್ದ ಆಸ್ಪತ್ರೆ ಒಂದೇ ಊರಿನಲ್ಲಿ ಇರುವುದು ಎಂದರೆ ಸರಿ. ನೀವು ಮತ್ತು ಪುನೀತ್ ಪ್ರತಿದಿನ ಮನೆಯಲ್ಲಿ ಜಗಳ ಮಾಡುತ್ತಿದ್ದೀರಿ, ಆ ವೇಳೆ ಪುನೀತ್ ರವರು ನಿಮ್ಮ ನಡತೆಯ ಬಗ್ಗೆ ಆರೋಪಿಸಿ ಬೈಯುತ್ತಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದೂ ನನ್ನ ನಡತೆಯ ಬಗ್ಗೆ ಅವರು ಮಾತನಾಡಿಲ್ಲ ಎಂದು ಉತ್ತರಿಸುತ್ತಾರೆ. ಆ ಕಾರಣಕ್ಕಾಗಿಯೇ ನೀವು ಮತ್ತು ನಿಮ್ಮ ತಂದೆಯವರು ಪುನೀತ್ ರವರಿಗೆ ಸಾಕಾಷ್ಟು ಸಾರಿ ಹೊಡೆದಿರುವುದು  ಉಂಟು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನೀವು ಪುನೀತ್ ರವರಿಗೆ ಕೊಡುವ ಹಿಂಸೆಯ ಬಗ್ಗೆ ಅವರ ತಂದೆ ತಾಯಿ ಮತ್ತು ಸಹೋದರರಿಗೆ ಮಾಹಿತಿ ಕೊಡುತ್ತಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಆ ವಿಚಾರವಾಗಿ ನಿಮ್ಮನ್ನು ಕೇಳಿದರೆ ಅವರನ್ನೂ ಸಹಾ ನೀವು ಅವಾಚ್ಯವಾಗಿ ಬೈದು ಅವಮಾನಿಸಿರುತ್ತಿದ್ದಿರಿ ಎಂಬ ಕಾರಣಕ್ಕೆ ನಿಮ್ಮಗಳ ವಿಚಾರಕ್ಕೆ ಬರುತ್ತಿರಲಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಪುನೀತ್ ರವರು ನಿಮ್ಮ ನಡತೆಯ ಬಗ್ಗೆ ತಲೆಕೆಡಿಸಿಕೊಂಡು ಅತಿಯಾಗಿ ಕುಡಿಯುವುದನ್ನು ಕಲಿತರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

ನೀವು ಪುನೀತ್ ರವರಿಗೆ ಯಾವಾಗಲೂ ಹಣ ಕೊಡುವಂತೆ ಪೀಡಿಸುತ್ತಿದ್ದ ಕಾರಣ ತಲೆ ಕೆಡಿಸಿಕೊಂಡು ಅವರ ಷುಗರ್ ಫ್ಯಾಕ್ಟರಿಗೆ ಕೆಲಸಕ್ಕೆ ಹೋಗುತ್ತಿದುದ್ದನ್ನು ಬಿಟ್ಟರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಂತರ ನೀವು ಸ್ವೇಚೆಯಾಗಿ ಜೀವನ ನಡೆಸುವುದನ್ನು ಪ್ರಾರಂಭಿಸಿದ ಕಾರಣ ಪುನೀತ್ ರವರು ಅತಿಯಾಗಿ ಕುಡಿದು ಎಲ್ಲೆಂದರಲ್ಲಿ ಬೀಳುತ್ತಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮಿಂದ ಪುನೀತ್ ರವರು ಬೇಸತ್ತು ನಿಮ್ಮನ್ನು ಹೆಂಡತಿಯೇ ಅಲ್ಲ ಎಂದು ತಿರಸ್ಕಾರ ಮಾಡಿದ್ದರು ಎಂದರೆ ಸಾಕ್ಷಿ ಕಡೆಯ ಕ್ಷಣದವರೆಗೂ ಅವರು ನನಗೆ ಆ ರೀತಿ ಹೇಳಿಲ್ಲ ಎಂದು ಉತ್ತರಿಸುತ್ತಾರೆ.

**ವಿನಂತಿಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.